OS No.97-2022
PW1

ದಿನಾಂಕಃ **22-08-2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ **9** ರಿಂದ **11** ರವರ ಪರ ವಕೀಲರಿಂದ

ನಮ್ಮ ಅಜ್ಜನ ಹೆಸರು ತಿಮ್ಮಪ್ಪ. ತಿಮ್ಮಪ್ಪನವರಿಗೆ 5 ಜನ ಮಕ್ಕಳು ಇದ್ದು ಅದರಲ್ಲಿ ಒಬ್ಬರು ತೀರಿಕೊಂಡಿದ್ದಾರೆ. ಕರಿಯಮ್ಮ ಇವರು ನಮ್ಮ ತಾತನ ಅಕ್ಕ ಇರುತ್ತಾರೆ. ನನ್ನ ತಂದೆಯ ಹೆಸರು ಗೋವಿಂದಪ್ಪ. ಕರಿಯಮ್ಮ ಈಕೆಯ ಗಂಡನ ಹೆಸರು ಸಿದ್ದಣ್ಣ ತಂದೆ ಸಿದ್ದಣ್ಣ ಎಂದರೆ ಸರಿ, ಅವರು ಹನುಮನಹಳ್ಳಿ ಗ್ರಾಮದವರು ಎಂದರೆ ಸರಿ. ಕರಿಯಮ್ಮ ಮತ್ತು ಸಿದ್ದಣ್ಣ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ನನ್ನ ದೊಡ್ಡಪ್ಪ ಬಸ್ಸಪ್ಪ ರವರು ತೀರಿಕೊಂಡಿದ್ದಾರೆ ಎಂದರೆ ಸರಿ, ಅವರ ಹೆಂಡತಿಯ ಹೆಸರು ನಂಜಮ್ಮ ಇರುತ್ತದೆ. ಅವರು 1 ನೇ ಪ್ರತಿವಾದಿ ಇರುತ್ತಾರೆ. ತಿಮ್ಮಪ್ಪ ತೀರಿಕೊಂಡಿದ್ದು ಅವರ ಹೆಂಡತಿ 2 ನೇ ಪ್ರತಿವಾದಿ ಇರುತ್ತಾರೆ, ಅವರಿಗೆ ಪವಿತ್ರ, ಆಶಾ ಮತ್ತು ಶೃತಿ ಎಂಬ ಮೂರು ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಬಸ್ಸಪ್ಪನ ಎರಡನೇ ಮಗನ ಹೆಸರು ನಂಜುಂಡಪ್ಪ ಇರುತ್ತದೆ, 3 ನೇ ಪ್ರತಿವಾದಿ ಆತನ ಹೆಂಡತಿ ಇರುತ್ತಾಳೆ. ಶಾಂತಮ್ಮ ಮತ್ತು ನಂಜುಂಡಪ್ಪನಿಗೆ ಇಬ್ಬರು ಮಕ್ಕಳು ಎಂದರೆ ಸರಿ, ಅವರ ಹೆಸರು ಕಾವ್ಯ ಮತ್ತು ಕಾರ್ತಿಕ್ ಎಂದರೆ ಸರಿ. ಅವರು ಈ ಪ್ರಕರಣದಲ್ಲಿ ಪಕ್ಷಗಾರರು ಇರುವುದಿಲ್ಲ ಎಂದರೆ ಸರಿ.

2. ತಿಮ್ಮಪ್ಪನ ಮಕ್ಕಳಾದ ಹನುಮಮ್ಮ, ಬಸ್ಸಪ್ಪ, ಗೋವಿಂದಪ್ಪ, ಸಿದ್ದಪ್ಪ ಮತ್ತು ಕರಿಯಮ್ಮ ಇವರು ಒಟ್ಟಿಗೆ ವಾಸ ಮಾಡುವುದನ್ನು ನಾನು ನೋಡಿರುವುದಿಲ್ಲ. ನಾವು ಚಿಕ್ಕವರು ಇದ್ದಾಗ ನನ್ನ ತಂದೆ-ತಾಯಿ ಬೇರೆ ಆಗಿರುವ ವಿಷಯ ತಿಳಿಸಿದ್ದರು. ತಿಮ್ಮಪ್ಪನ ಮಕ್ಕಳುಗಳು ಆಸ್ತಿಯಲ್ಲಿ ಬಾಯಿ ಮಾತಿನಿಂದ ಭಾಗ ಮಾಡಿಕೊಂಡು ತಮ್ಮ ತಮ್ಮ ಹಿಸ್ಸೆಯಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಅವರು ತಮ್ಮ ಹಿಸ್ಸೆಗಳನ್ನು ಖಾತೆ ಕೂಡ ಮಾಡಿಸಿಕೊಂಡಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸರ್ವೆ ನಂ 22/2 ಅಂದರೆ ದಾವಾ ಆಸ್ತಿಯನ್ನು ಭಾಗ ಮಾಡಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ, ಉಳಿದ ಆಸ್ತಿಗಳನ್ನು ಭಾಗ ಮಾಡಿಕೊಂಡು ಅಳತೆ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನಾವು, ಸಿದ್ದಪ್ಪನ ಮತ್ತು ಬಸ್ಸಪ್ಪನ ಮಕ್ಕಳು ಒಟ್ಟಿಗೆ ವ್ಯವಸಾಯ ಮಾಡುತ್ತೇವೆ. ಸಿದ್ದಪ್ಪನ ಮಕ್ಕಳು 2 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ಉಳಿದ 1 ಎಕರೆ 31 ಗುಂಟೆಯಲ್ಲಿ ನಾವು ಮತ್ತು ಬಸ್ಸಪ್ಪನ ಮಕ್ಕಳು ಸಾಗುವಳಿ ಮಾಡುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಯಾವುದೇ ಭಾಗ ಆಗಿಲ್ಲ ಎಂದು ಹೇಳುತ್ತಾರೆ. ಸಿದ್ದಪ್ಪನ ಮಕ್ಕಳು ಖಾತೆ ಮಾಡಿಸಿಕೊಳ್ಳದ ಕಾರಣ ನಾನು ಭಾಗ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸಿದ್ದಪ್ಪನ ಹೆಂಡತಿ ರಾಮಮ್ಮ ನವರಿಗೆ ಸರ್ವೆ ನಂ 22/6 ರಲ್ಲಿ 29 ಗುಂಟೆ ಜಮೀನು ಕೊಡಲಾಗಿದೆ ಎಂದರೆ ಸರಿ, ಈಗ ತೋರಿಸುತ್ತಿರುವ ದಾಖಲೆ ಅದರ ಪಹಣಿ ಪತ್ರಿಕೆ ಎಂದರೆ ಸರಿ. ಸಾಕ್ಷಿಯು ಒಪ್ಪಿಕೊಂಡ ಕಾರಣ ದಾಖಲೆಯನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಸರ್ವೆ ನಂ 22/5 ರಲ್ಲಿ ಭಾಗ ಆಗಿದೆ ಎಂದರೆ ಸರಿ, ಈಗ ತೋರಿಸುತ್ತಿರುವ ದಾಖಲೆ ಅದರ ಪಹಣಿ ಪತ್ರಿಕೆ ಎಂದರೆ ಸರಿ. ದಾಖಲೆಯನ್ನು ನಿ.ಡಿ -2 ಎಂದು ಗುರುತಿಸಲಾಯಿತು. ಸರ್ವೆ ನಂ 22/5 ರಲ್ಲಿ 7.08 ಗುಂಟೆ ಭೂಸ್ವಾಧೀನ ಆಗಿದೆ ಎಂದರೆ ಸರಿ, ಸಾಕ್ಷಿಯು ನಮ್ಮ ನಮ್ಮ ಹಿಸ್ಸೆಯ ಪರಿಹಾರವನ್ನು ನಾವು ಪಡೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಸರ್ವೆ ನಂ 9/3 ರಲ್ಲಿ ಕೂಡ ಭಾಗ ಆಗಿದೆ ಎಂದರೆ ಸರಿ, ಅದರಲ್ಲಿ ಸ್ವಲ್ಪ ಜಮೀನು ಭೂಸ್ವಾಧೀನ ಆಗಿದೆ ಎಂದರೆ ಸರಿ ಆದರೆ ಸಂಬಂಧಪಟ್ಟವರು ಹಣವನ್ನು ಪಡೆದುಕೊಂಡಿದ್ದಾರೆ ಹಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ದಾಖಲೆಯನ್ನು ನಿ.ಡಿ-3 ಎಂದು ಗುರುತಿಸಲಾಯಿತು. ಸರ್ವೆ ನಂ 22/3 ಬಸ್ಸಪ್ಪನವರ ಹಿಸ್ಸೆಗೆ ಬಂದಿದೆ ಎಂದರೆ ಸರಿ, ಸದರಿ ದಾಖಲೆಯನ್ನು ನಿ.ಡಿ-4 ಎಂದು ಗುರುತಿಸಲಾಯಿತು. ಸರ್ವೆ ನಂ 22/5 ಲಕ್ಕಮ್ಮನವರ ಹಿಸ್ಸೆಗೆ ಬಂದಿದೆ ಎಂದರೆ ಸರಿ, ದಾಖಲೆಯನ್ನು ನಿ.ಡಿ-5 ಎಂದು ಗುರುತಿಸಲಾಯಿತು. ನನ್ನ ಚಿಕ್ಕಪ್ಪ ಸಿದ್ದಪ್ಪ ತಂದೆ ತಿಮ್ಮಪ್ಪ ಇವರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಅವರ ಹೆಸರಿಗೆ ವರ್ಗಾವಣೆ ಆಗದ ಕಾರಣ ಮತ್ತು ಜಮೀನು ಸ್ವಾಧೀನವಾಗಿರುವ ಕಾರಣ ನಾನು ಆಸ್ತಿಯನ್ನು ಎತ್ತಿಹಾಕಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸಿದ್ದಪ್ಪ ತಂದೆ ತಿಮ್ಮಪ್ಪ ಆಸಂಧಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ ಅವರು ಅಲ್ಲಿಯೇ ತೀರಿಕೊಂಡರು ಎಂದರೆ ಸರಿ. ಅವರ ಮಕ್ಕಳು ಅವರ ಜೀವಿತ ಕಾಲದಲ್ಲಿ ತಂದೆಯ ವಿರುದ್ಧ ವಿಭಾಗ ಕೋರಿ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. 9 ಆಸ್ತಿಯಲ್ಲಿ ಭಾಗ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿನ ಆಸ್ತಿಯ ಪೈಕಿ ಉತ್ತರ ಭಾಗದ 2 ಎಕರೆ 5 ಗುಂಟೆ ಜಮೀನನಿನಲ್ಲಿ ಕೂಡ ಭಾಗ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ನ್ಯಾಯಾಲಯದಲ್ಲಿ ಡಿಕ್ರಿ ಕೂಡ ಆಯಿತು ಎಂದರೆ ನನಗೆ ಗೊತ್ತಿಲ್ಲ. ಈಗ ಎಫ್.ಡಿ.ಪಿ ಪ್ರಕರಣ ಜಾರಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ತಹಶೀಲ್ದಾರ್ ರವರಿಗೆ ಆಸ್ತಿಗಳನ್ನು ಅಳತೆ ಮಾಡಲು ಆದೇಶ ಕೂಡ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯಗಳು ಮೂಲದಿಂದಲೇ ತಿಳಿದಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಪರಿಹಾರ ಧನ ಬಂದಿರುವ ಕಾರಣ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಈ ಎಲ್ಲಾ ವಿಷಯಗಳು ಗೊತ್ತಿದ್ದ ಕಾರಣ ಅವರ ಜೀವಮಾನದಲ್ಲಿ ಅವರು ಯಾವುದೇ ದಾವೆ ಹಾಕಲಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ಮಾತು ಕೇಳಿ ಆತನನ್ನು ಸೇರಿಸಿಕೊಂಡು ಪ್ರತಿವಾದಿ ನಂಬರ್ 9 ರಿಂದ 11 ಇವರ ವಿರುದ್ಧ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ತಿಮ್ಮಪ್ಪನ ಎಲ್ಲಾ

ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಭಾಗ ಆಗಿರುವುದರಿಂದ ಸೇರಿಸಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಭಾಗ ಕೇಳಲು ನನಗೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಧನದಲ್ಲಿ ಕೂಡ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.